ಅಂದರೆ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಕಾನೂನು ಇಲಾಖೆ ಮತ್ತು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಇಲಾಖೆಗಳನ್ನು ಹೊರತು ಪಡಿಸಿ ಐ ಎ ಎಸ್ ವೃಂದದಲ್ಲಿ ಸೇರಿಸಲು ನಿರ್ಣಯಿಸಲಾಗಿದೆ ಆದ್ದರಿಂದ ಮೇಲೆ ತಿಳಿಸಿದ ತಾಂತ್ರಿಕ ವರ್ಗೀಕೃತ ಇಲಾಖೆಗಳನ್ನು ಹೊರತುಪಡಿಸಿ ಬೇರೆ ಇಲಾಖೆಗಳಲ್ಲಿ ಅಖಿಲ ಭಾರತ ಅಧಿಕಾರಿಗಳಲ್ಲದವರನ್ನು ಸರ್ಕಾರದ ಕಾರ್ಯದರ್ಶಿ ಹುದ್ದೆಗಳಿಗೆ ನೇಮಿಸಲಾಗುವುದಿಲ್ಲ

ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3(430)

ಸದಸ್ಯರ ಹೆಸರು ಶ್ರೀ ಕರಡಿ ಸಂಗಣ್ಣ ಅಮರಪ್ಪ(ಕೊಪ್ಪಳ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಗಳು)

ಪ್ರಶ್ನೆ

1 ಕರ್ನಾಟಕ ಆಡಳಿತ ಸುಧಾರಣಾ ಆಯೋಗ ಯಾವ ದಿನಾಂಕದಂದು ರಚಿಸಲಾಯಿತು

2 ಇಲ್ಲಿಯವರೆಗೂ ಆಯೋಗವು ಖರ್ಚು ಮಾಡಿದ ಒಟ್ಟು ಹಣವೆಷ್ಟು?

3 ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಇಲ್ಲಿಯವರೆಗೂ ನೀಡಿರುವ ವರದಿಗಳ ಒಟ್ಟು ಸಂಖ್ಯೆ?

4 ರಾಜ್ಯ ಆಡಳಿತವನ್ನು ಸುಧಾರಣೆಗಾಗಿ ಆಯೋಗವು ಮಾಡಿರುವ ಶಿಫಾರಸ್ಸುಗಳು ಯಾವುವು?

5 ಈ ಶಿಫಾರಸ್ಸುಗಳ ಮೇಲೆ ರಾಜ್ಯ ಸರ್ಕಾರವು ಇಲ್ಲಿಯತನಕ ತೆಗೆದುಕೊಂಡ ಕ್ರಮಗಳೇನು?

ಉತ್ತರ

1 ದಿನಾಂಕ 17-4-2000

2 ರೂ 67 94,227

3 2 ವರದಿಗಳು

4 ಆಡಳಿತ ಸುಧಾರಣಾ ಆಯೋಗವು ತನ್ನ ಮಧ್ಯಂತರ ವರದಿಯಲ್ಲಿ ಸಚಿವಾಲಯದ ಸುಧಾರಣೆ ಜಿಲ್ಲಾ ಆಡಳಿತ ಸುಧಾರಣೆ ಮತ್ತು ಉತ್ತಮ ಆಡಳಿತ ನೀಡುವ ಬಗ್ಗೆ ಶಿಫಾರಸ್ಸು ಮಾಡಿದೆ ತನ್ನ ಅಂತಿಮ ವರದಿಯಲ್ಲಿ ಆಯೋಗವು ಈ ಕೆಳಗಿನ ವಿಷಯಗಳ ಬಗ್ಗೆ ಶಿಫಾರಸ್ಸು ಮಾಡಿದೆ

1 ಸರಿಗಾತ್ರದ ಕ್ರಮಗಳು

2 ಆರ್ಥಿಕ ಮಿತವ್ಯಯದ ಕ್ರಮಗಳು

3 ಆಡಳಿತಾತ್ಮಕ ಕ್ರಮಗಳು

4 ವೃತ್ತಿಯ ಆಯ್ಕೆಯ ಅವಕಾಶಗಳು

5 ಇ-ಆಳ್ವಿಕೆ

6 ಪ್ರಕಾರ್ಯಗಳ ಪುನರಾವಲೋಕನ ನಡೆಸಿದ 13 ಇಲಾಖೆಗಳಿಗೆ ಸಂಬಂಧಿಸಿದಂತೆ ಶಿಫಾರಸ್ಸುಗಳು

7 ಸಣ್ಣ ಯೋಜನೆಗಳನ್ನು ವಿಲೀನಗೊಳಿಸುವುದು

8 ಬೇರೆಯವರಿಗೆ ವಹಿಸುವ ಕ್ಷೇತ್ರಗಳನ್ನು ಗುರುತಿಸುವುದು

5 ವರ್ಗಾವಣೆ ನೀತಿ, ಸಾರ್ವಜನಿಕ ಸನ್ನದುಗಳ ತಯಾರಿಕೆ ಸಚಿವಾಲಯದಲ್ಲಿ ಏಕ ಕಡತ ವದ್ದತಿ ಹಾಗೂ ಪೀರಾಧಿಕಾರಿ ವದ್ದತಿ ಭ್ರಷ್ಟಾಚಾರ ನಿರ್ಮೂಲನ ಉನ್ನತ ಸಮಿತಿಯನ್ನು ರಚಿಸುವುದು ಇತ್ಯಾದಿಗಳನ್ನು ಒಳಗೊಂಡಂತೆ ಮಧ್ಯಂತರ ವರದಿಯಲ್ಲಿನ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆ

ಅಂತಿಮ ವರದಿಯನ್ನು ದಿನಾಂಕ 27 12 2001ರಂದು ನೀಡಲಾಗಿದ್ದು ಶಿಫಾರಸ್ಸುಗಳನ್ನು ಪರಿಶೀಲಿಸಿ ಹಂತಹಂತವಾಗಿ ಜಾರಿಗೆ ತರಲು ಕ್ರಮ ತೆಗೆದುಕೊಳ್ಳಲಾಗುವುದು

ವಿಧಾನಸೌಧ ಪ್ರವೇಶಕ್ಕೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 10(472)